## ಪ್ಲಾಸ್ಟಿಕ್ ಭಸ್ಮಾಸುರ

ಆಗಸ್ಟ್ 1ರ ಸಂಚಿಕೆಯಲ್ಲಿ ಗುರುರಾಜ್ ದಾವಣಗೆರೆ ಅವರ 'ಪ್ಲಾಸ್ಟಿಕ್ ಭಸ್ಮಾಸುರ' ಲೇಖನ ಓದಿದೆ. ರಾಮಣ್ಣನ ತಪ್ಪಿಗೆ ಭೀಮಣ್ಣನನ್ನು ಚಚ್ಚಿದಂತೆ ಭಾಸವಾಯಿತು. ಯಾವ ತಪ್ಪೂ ಮಾಡದ ಪ್ಲಾಸ್ಟಿಕ್ ಅನ್ನು ಭಸ್ಮಾಸುರನಂತೆ ಬಣ್ಣಿಸಿದ್ದು ನೋಡಿ ದುಃಖವಾಯಿತು.

ಪ್ಲಾಸ್ಟಿಕ್ ಅಪಾಯಕಾರಿ, ಅದು ಕಡಲು ಸೇರಿ, ಹಸು–ಕರುಗಳ ಒಡಲು ಸೇರಿ ಅನಾಹುತ ಮಾಡುತ್ತಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಆ ಪ್ಲಾಸ್ಟಿಕ್ ತಾನಾಗಿಯೇ ಅವುಗಳ ಒಡಲು ಸೇರುತ್ತಿದೆಯೇ? ಮೂರ್ಖ ಮಾನವರ ದುರಭ್ಯಾಸಕ್ಕೆ ಆ ಪರೋಪಕಾರಿ ಪ್ಲಾಸ್ಟಿಕ್ ಅನ್ನು ಬಯ್ಯುವುದು ಸರಿಯೇ?

ಪ್ಲಾಸ್ಟಿಕ್ ಕೆಟ್ಟದ್ದೇ ಆಗಿದ್ದರೆ ಅದನ್ನು ಯಾಕೆ ತಯಾರಿಸುತ್ತಿದ್ದಾರೆ? 'ಇದು ಪ್ಲಾಸ್ಟಿಕ್, ತಿನ್ನಬಾರದು' ಎಂದು ಯೋಚಿಸಲು ಹಸುವಿಗೆ ಅಷ್ಟು ಜ್ಞಾನವಿದೆಯೇ? ಬೀದಿಯಲ್ಲಿ ಸಿಗುವುದನ್ನು ತಿಂದು ಹಾಲು ಕೊಡಲಿ ಎಂಬ ದುರಾಸೆಯಿಂದಲ್ಲವೆ ಹಸುಗಳು ಆ ಸ್ಥಿತಿಗೆ ಬಂದಿರುವುದು? ಮೊದಲಾದರೆ ಗೋಮಾಳಗಳಿದ್ದವು. ಈಗ ಗೋಮಾಳಗಳು ಮಾಲ್‌ಗಳಾಗಿವೆ. ಗೋಮಾಳವೇ ಇಲ್ಲದ ಮೇಲೆ ಗೋವುಗಳು ಯಾಕಿರಬೇಕು?

ಒಂದು ವರ್ಗದ ಪ್ಲಾಸ್ಟಿಕ್ ಅನ್ನು ನಿಷೇಧಿಸಿ ಇನ್ನೊಂದು ವರ್ಗದ ಪ್ಲಾಸ್ಟಿಕ್ ಅನ್ನು ಪುರಸ್ಕರಿಸಿ ಏನನ್ನು ಸಾಧಿಸಿದಂತಾಯಿತು? ವರ್ಷಕ್ಕೆ ನೂರು ಟನ್ನುಗಳಷ್ಟು ಪ್ಲಾಸ್ಟಿಕ್ ತಯಾರಿಸುವ ಕಂಪನಿಗಳು ಕೇವಲ 20–25 ಟನ್ ಒಳ್ಳೆಯ ದಪ್ಪದ ಪ್ಲಾಸ್ಟಿಕ್ ತಯಾರಿಸುತ್ತಾ ಉದ್ಯಮವನ್ನು ಉಳಿಸಿಕೊಳ್ಳಲು ಸಾಧ್ಯವೇ? ಪ್ಲಾಸ್ಟಿಕ್ ನಿಷೇಧ ಸಾಧ್ಯವೇ ಇಲ್ಲ ಎಂದ ಮೇಲೆ, ಅರ್ಧಂಬರ್ಧ ನಿಷೇಧ ಹಾಕುವುದು ಯಾಕೆ?

ಪ್ಲಾಸ್ಟಿಕ್ ಇರಲಿ. ಆದರೆ ಅದು ಹಸುವಿನ, ನದಿಯ, ಸಮುದ್ರದ ಒಡಲಿಗೆ ಹೋಗದಂತೆ ಜಾಗ್ರತೆ ವಹಿಸಿದರೆ ಆಯಿತಲ್ಲವೇ?

–ನಾಗಶಯನ



ಪ್ಲಾಸ್ಟಿಕ್ ಬಳಕೆ ಆರಂಭದ ದಿನಗಳಲ್ಲಿ ಅನುಕೂಲವಾಗಿ ಕಂಡರೂ, ಇಂದು ವ್ಯತಿರಿಕ್ತವಾಗಿ ಪರಿಣಮಿಸಿದೆ. ಇದಕ್ಕೆ ಪರಿಹಾರವೆಂದರೆ ಪ್ಲಾಸ್ಟಿಕ್ ಉತ್ಪಾದನಾ ಘಟಕಗಳನ್ನು ಸ್ಥಗಿತಗೊಳಿಸಿ ಪರ್ಯಾಯವಾಗಿ ಪೂರ್ವಪದ್ಧತಿ ಅನುಸರಿಸುವುದು. ಸೆಣಬಿನ ಚೀಲಗಳ ಬಳಕೆಯನ್ನು ಕಡ್ಡಾಯಗೊಳಿಸುವುದು. ಬೆಂಗಳೂರಿನ ಪೀಣ್ಯದಲ್ಲಿ ಮಂಗಳೂರು ಮೂಲದ ಶೆಟ್ಟಿ ಎಂಬುವರು ಬಿಸಿನೀರಿನಲ್ಲಿ ಕರಗುವಂತಹ ಚೀಲಗಳನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಿರುವುದಾಗಿ ತಿಳಿದುಬಂದಿದೆ. ಇಂಥ ಪ್ರಯತ್ನಗಳಿಗೆ ಸೂಕ್ತ ಪ್ರೋತ್ಸಾಹ ಸಿಗಬೇಕು.

–ಮಧುರ ಸುಬ್ರಹ್ಮಣ್ಯ, ಎ.ಕೆ. ಅನಂತಮೂರ್ತಿ ಬೆಂಗಳೂರು, ಆನಂದ್ ಕುಮಾರ್ ಚಿತ್ರದುರ್ಗ

ಪ್ಲಾಸ್ಟಿಕ್ ಪಿಡುಗನ್ನು ರಾತ್ರೋ ರಾತ್ರಿ ಬದಲಾಯಿಸುವತ್ತ ಸರ್ಕಾರಗಳು ತೆಗೆದುಕೊಳ್ಳುತ್ತಿರುವ ಕ್ರಮಗಳಿಂದ ಭ್ರಷ್ಟಾಚಾರ ಹೆಚ್ಚುತ್ತಿದೆ. ಈ ಕೈಗಾರಿಕೆಯನ್ನು ಅವಲಂಬಿಸಿರುವ ಲಕ್ಷಾಂತರ ಕಾರ್ಮಿಕರ, ಉದ್ಯಮಿಗಳ ಉಳಿವಿನ ಬಗ್ಗೆಯೂ ಯೋಚಿಸಬೇಕಿದೆ. ದಿನಬಳಕೆಯ ಅಪಾರ ಮೊತ್ತದ ಬಂಡವಾಳ ತೊಡಗಿಸಿರುವ ತಯಾರಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡುವ ಪ್ರಯತ್ನಗಳಾದರೆ ಮಾತ್ರ ಪ್ಲಾಸ್ಟಿಕ್ ಸಮಸ್ಯೆಗೆ ಮುಕ್ತಿ ಸಾಧ್ಯ. ಕೇವಲ ಕಾನೂನು ರಚನೆಯಿಂದ ಫಲಿತಾಂಶ ಸಿಗದು.

–ರಾಜೀವ್ ಎನ್. ಮಾಗಲ್ ಹಾಸನ, ಬಸಪ್ಪ ಎಸ್ ಮುಳ್ಳೂರ, ಹಲಗತ್ತಿ ಬಿ., ಮನೋಹರ ಚಳ್ಳಕೆರೆ, ನಾ.ಕು. ಗಣೇಶ್, ಬೆಂಗಳೂರು

### ಖುಷಿ ನೀಡುವ ಲೇಖನ

ಆಗಸ್ಟ್ 1ರ ಸಂಚಿಕೆಯಲ್ಲಿ ಸುಮವೀಣಾ ಹಾಸನ ಬರೆದಿರುವ 'ಬಳೆಗಾರ ಚನ್ನಯ್ಯ ಬಾಗಿಲಿಗೆ ಬರಲೊಲ್ಲ' ಲೇಖನ ಮಹಿಳೆಯರಿಗೆಲ್ಲ ಸಂತೋಷ ನೀಡುವಂತಿದೆ.

–ಟಿ. ಲಲಿತಾ, ಬೆಂಗಳೂರು

### ಕಾರ್ಗಿಲ್ ಸ್ಮಾರಕ

1999ರ ಕಾರ್ಗಿಲ್ ಕದನದಲ್ಲಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮರ ನೆನಪಿನಲ್ಲಿ ಕಟ್ಟಿಸಿದ ಧಾರವಾಡದ ಕಾರ್ಗಿಲ್ ಸ್ಮಾರಕವನ್ನು ಪರಿಚಯಿಸಿದ ಡಾ. ಲಕ್ಷ್ಮಣ ವಿ.ಎ. ಅವರಿಗೆ ಧನ್ಯವಾದ.

–ಪಿ. ಜಯವಂತ ಪೈ ಕುಂದಾಪುರ, ಟಿ.ಎಂ. ಮಾನಪ್ಪ ಶಿವಮೊಗ್ಗ

### ಕನ್ನಡ ಶಾಲೆಯ ನೆನಪು

ಜುಲೈ 25 ರ ಸಂಚಿಕೆಯಲ್ಲಿ 'ಸವಿ ಸವಿ ನೆನಪು' ಪುಟದಲ್ಲಿ ಪ್ರಕಟವಾದ 'ಅಪ್ಪನ ಕೈಗಡಿಯಾರ; ಅಮ್ಮನ ಇಸ್ತ್ರಿ' (ದತ್ತಾತ್ರೇಯ ಭಟ್ಟ, ಕಣ್ಣಿಪಾಲ) ಲೇಖನ, ನಮ್ಮ ಬಾಲ್ಯದ ಕನ್ನಡ ಶಾಲೆಯ ನೆನಪುಗಳ ಮೆರವಣಿಗೆಯನ್ನು ಒಮ್ಮೆ ಮನಸ್ಸಲ್ಲಿಯೇ ಮಾಡಿ ಮಾಯವಾಯಿತು.

–ಗೋಪಾಲ ಹೆಗಡೆ, ಕೆ.ಎಲ್. ಬಾಬು

### ಹಣಕಾಸಿನ ಸಾಕ್ಷರತೆ ಬೇಕು

ಆಗಸ್ಟ್ 1ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಎನ್. ಉದಯಕುಮಾರ್ ಬರೆದಿರುವ 'ಹಣಕಾಸಿನ ಸಾಕ್ಷರತೆಯ ಮಹತ್ವ ಅಗತ್ಯ' ಲೇಖನ ಸಕಾಲಿಕ. ದಿನೇ ದಿನೆ ನಾಯಿಕೊಡೆಯಂತೆ ತಲೆ ಎತ್ತುತ್ತಿರುವ ಖಾಸಗಿ ಕಂಪನಿಗಳಲ್ಲಿ ಜನ ನಮ್ಮ ಉಳಿತಾಯದ ಹಣವನ್ನು ಹೂಡುವ ಮುಂಚೆ, ಪೂರ್ವಾಪರ ಅರಿಯುವುದು ಅತ್ಯಗತ್ಯ. 'ಟೋಪಿ ಹಾಕಿಸಿಕೊಳ್ಳುವವರು ಇರುವವರೆಗೂ ಟೋಪಿ ಹಾಕುವವರು ಸರತಿಯಲ್ಲಿ ನಿಂತಿರುತ್ತಾರೆ' ಎಂಬುದಕ್ಕೆ ಜ್ವಲಂತ ನಿದರ್ಶನ ಇತ್ತೀಚಿನ ಐಎಂಎ ಕಂಪನಿಯ ವಂಚನೆ ಪ್ರಕರಣ.

–ಸುಂದರ್, ಬೆಂಗಳೂರು

### ಸಮಾಜಕ್ಕೆ ಹಿಡಿದ ಕೈಗನ್ನಡಿ

ಆಗಸ್ಟ್ 1ರ ಸಂಚಿಕೆಯಲ್ಲಿ ಪ್ರಕಟವಾದ ವಿನಯಾ ಒಕ್ಕುಂದ ಅವರ ಕಥೆ 'ನೀ ಹೊರಟಿದ್ದೀಗ ಎಲ್ಲಿಗೆ?', ಸಮಾಜದ ಕಣ್ಣು ತೆರೆಸುವಂತಿದೆ. ಹೂ ಬಳ್ಳಿ ಸೇರಿ ಹುಬ್ಬಳ್ಳಿ ಅಂತಾಗ್ಯಾದ. ಆದ್ರ ಇಂದಿರೆಯ ಮುಡಿಗೆ ಹೂವೂ ಇಲ್ಲ, ಬಳ್ಳಿಯೂ ಇಲ್ಲ. ತಲಿಮ್ಯಾಲ ಭಾರವಾದ ನಿಂಬಿ ಹಣ್ಣಿನ ಬುಟ್ಟಿ ಮಾತ್ರ ಐತಿ. ಇದು ಕೇವಲ ಇಂದಿರೆ ಒಬ್ಬಳ ಸಮಸ್ಯೆ ಅಲ್ಲ. ಇಡೀ ಸಮಾಜದಾಗ ಇಂಥ ನೂರಾರು ಸಮಸ್ಯೆ ಬಡವರ, ದೀನರ, ಕೂಲಿಕಾರರ ಕೊರಳಿಗ ಉರುಳಾಗ್ಯಾದ. ಇದು ನಮ್ಮ ರಾಷ್ಟ್ರದ, ಸಮಾಜದ ದುರಂತಕ್ಕ ಹಿಡಿದ ಕೈಗನ್ನಡಿ ಆಗ್ಯಾದ.

–ಪಂಡಿತರಾವ ಪಾಟೀಲ



ಅಷ್ಟೇ ಅಲ್ವಾ ಜೀವನ? ಕೆಲವೊಂದು ಸಂಬಂಧಗಳು ನಮ್ಮ ಉಪಯೋಗ ಮುಗಿಯುವವರೆಗೆ ಅಷ್ಟೆ. ಅದೆಷ್ಟೇ ಕಷ್ಟ, ಹಿಂಸೆಯಾದರೂ ಹೊಂದಿಕೊಂಡು ಹೋಗುವ ನಿಂಬೆ ಮಾರುವ ಹೆಂಗಸು ಕೊನೆವರೆಗೂ ಧರ್ಮದ ಹಣಕ್ಕೆ ಕೈಯೊಡ್ಡಲೇ ಇಲ್ಲ! ಸ್ವಾರ್ಥಿಗಳ ನಡುವೆ ತನ್ನ ಸ್ವಾಭಿಮಾನ ಬಿಟ್ಟುಕೊಡದ, ಸತ್ಯ ಪ್ರಾಮಾಣಿಕತೆಯನ್ನು ಅಪ್ಪಿಕೊಂಡ ಆಕೆ ಅನರ್ಘ್ಯ ರತ್ನವೇ ಸರಿ. ಆದರೆ ಒಳ್ಳೆಯ ನಡತೆಯಿದ್ದರೂ ಆಕೆಯ ಬದುಕು ಮೂರಾಬಟ್ಟೆಯಾಯಿತು. ಕೊನೆಗೆ ಏನಾದಳೋ ತಿಳಿಯಲೇ ಇಲ್ಲ. ಒಂದೊಂದು ನಗುಮೊಗದ ಮುಖದ ಹಿಂದೆಯೋ ಹಲವು ತಿರುವುಗಳ ಮಹಾಕಾವ್ಯವೇ ಇರುತ್ತದೆ ಅಲ್ವಾ! ಇಂದಿರೆ ಪಾತ್ರದ ಮೂಲಕ ಓರ್ವ ಸಾಮಾನ್ಯ ಮಹಿಳೆಯ ದುರಂತದ ಬದುಕನ್ನು ವಿನಯಾ ಒಕ್ಕುಂದ ಚೆನ್ನಾಗಿ ಚಿತ್ರಿಸಿದ್ದಾರೆ.

–ಸೀಮಾ ಪೋನಡ್ಕ, ಪುತ್ತೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in